**ದಿನಾಂಕಃ** 01-03-2024 **ಓ ಎಸ್ ನಂ.8/2020(ಪಿ.ಡಬ್ಲ್ಯೂ 2)**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ** ಶ್ರೀ ಸಿ ಎಸ್ ಎಸ್ ವಕೀಲರಿಂದ 1 ನೇ ಪ್ರತಿವಾದಿಯರ ಪರಃ

ನಾನು ಪಿ ಯು ಸಿ ವರೆಗೆ ಓದಿದ್ದೇನೆ. ಈ ದಾವೇಯಲ್ಲಿ ಕೋರ್ಟಿಗೆ ಬಂದವರು ಅಣ್ಣಾಗೌಡಾ ಪಾಟೀಲ ಇರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲಾ. ಈ ದಾವೆಯನ್ನು ವಾಟ್ನಿ ಕೋರಿ ದಾಖಲಿಸಿದ್ದಾರೆ. ಈ ದಾವೇಯನ್ನು

ಒಂದು ಮನೆ, ಒಂದು ಪಡ ಜಾಗ ಮತ್ತು ಜಮೀನುಗಳಲ್ಲಿ ವಿಭಾಗ ಕೋರಿ ದಾಖಲಿಸಿದ್ದಾರೆ. ವಾದಿ ಮತ್ತು ಪ್ರತಿವಾದಿಯರ ತಂದೆ ಹೆಸರು ಪಾರೇಶಗೌಡಾ ಅಂದರೆ ನಿಜ. ಸದರಿ ಪಾರೇಶಗೌಡಾ ಇತನಿಗೆ 8 ಜನ ಮಕ್ಕಳು ಅವರೆಂದರೆ ಅಪ್ಪಾಸಾಹೇಬ, ಅಣ್ಣಾಗೌಡಾ, ಸುಭಾಸ, ಸುರೇಶ, ಪ್ರಕಾಶ, ಕುಮಾರ, ಸದರಿ ಉಳಿದ ಇಬ್ಬರ ಹೆಣ್ಣು ಮಕ್ಕಳ ಹೆಸರು ನನಗೆ ಗೋತ್ತಿಲ್ಲಾ. ಸದರಿ ಹೆಣ್ಣು ಮಕ್ಕಳ ಹೆಸರು ಸುಶೀಲಾ ಮತ್ತು ವಿಲಾಸಮತಿ ಇರುತ್ತಾರೆ ಅಂದರೆ ನಿಜ. 1 ನೇ ಪ್ರತಿವಾದಿ ಅಣ್ಣಾಗೌಡಾ ತನ್ನ 20 ನೇ ವರ್ಷದಲ್ಲಿ ಭಾರತೀಯ ಸೈನ್ಯಕ್ಕೆ ಸೇರಿದ್ದರು ಅಂದರೆ ನಿಜ, ಅವರು 25 ವರ್ಷ ಸೈನ್ಯದಲ್ಲಿ ಕೆಲಸ ಮಾಡಿ ನಿವೃತ್ತಿಯಾಗಿದ್ದಾರೆ ಅಂದರೆ ನಿಜ.ಆನಂತರ ಅವರು ಕೆ ಎಸ್ ಆರ್ ಟಿ ಸಿ ಯಲ್ಲಿ ನಿರ್ವಾಹಕ ಅಂತಾ ಕೆಲಸ ಮಾಡುತ್ತಿದ್ದಾರೆ ಅಂದರೆ ನಿಜ. ಅಲ್ಲಿ ಸಹ 2007 ರಲ್ಲಿ ನಿವೃತ್ತಿಯಾಗಿದ್ದಾರೆ. ಸದರಿ ಅಣ್ಣಾಗೌಡಾ ಕೆಲಸ ಮಾಡುವ ಕಾಲಕ್ಕೆ ತನ್ನ ಸಹೋದರರಿಗೆ ಸಹಾಯ ಮಾಡಲು ಹಣ ಕೊಡುತ್ತಿದ್ದ ಅಂದರೆ ಸರಿಯಲ್ಲ. ಸದರಿ ಅಣ್ಣಾಗೌಡಾ ತನ್ನ ಹೆಂಡತಿ ಮಕ್ಕಳನ್ನು ತನ್ನ ಜೊತೆ ಕರೆದುಕೊಂಡು ಹೋದರೆ ಖರ್ಚು ಹೆಚ್ಚಾಗುತ್ತದೆ ಅಂತಾ ಜೀವನಪೂರ್ತಿ ಅವರನ್ನು ಊರಲ್ಲಿ ಬಿಟ್ಟು ಹೋಗಿದ್ದರು ಅಂದರೆ ನಿಜ. ನಿವೃತ್ತಿಯಾದ ನಂತರ ಸದರಿ ಅಣ್ಣಾಗೌಡಾನಿಗೆ ಹಣ ಬಂದಿದೆ ಅಂದರೆ ನಿಜ. ಸದರಿ ಹಣದಿಂದ ಕಡಹಟ್ಟಿ ಗ್ರಾಮದಲ್ಲಿ 1 ವರೆ ಎಕರೆ ಜಮೀನು ಸದರಿ ಅಣ್ಣಾಗೌಡಾ ಖರೀದಿಸಿದ್ದಾನೆ ಅಂದರೆ ನನಗೆ ಗೋತ್ತಿಲ್ಲಾ. ಸದರಿ ಜಮೀನು ತನ್ನ ನಿವೃತ್ತಿ ಹಣದಿಂದ ಅಣ್ಣಾಗೌಡಾ ಖರೀದಿಸಿದ ವಿಷಯ ನನಗೆ ಗೋತ್ತಿದ್ದರು ಸಹ ಗೋತ್ತಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಕಡಹಟ್ಟಿ ಗ್ರಾಮದ ಸರ್ವೆ ನಂಃ 3/2 ರಲ್ಲಿ 1 ಎಕರೆ 20 ಗುಂಟೆ ಜಮೀನು ಸದರಿ ಅಣ್ಣಾಗೌಡಾ ಹೆಸರಿನಲ್ಲಿ ಖರೀದಿ ಆಗಿದೆ ಅಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಖರೀದಿಯಾಗಿದೆ ಅಂತಾ ಹೇಳುತ್ತಾರೆ. ಸದರಿ ಜಮೀನು ಖರೀದಿಸಲು ಕುಮಾರ ಅನ್ನುವವರು 1 ಲಕ್ಷ ರೂ ಕೊಟ್ಟಿರುತ್ತಾರೆ. 1 ನೇ ಪ್ರತಿವಾದಿ ತನ್ನ ನಿವೃತ್ತಿಯಿಂದ ಸಾಕಷ್ಟು ಹಣ ಬಂದಿದ್ದರಿಂದ ಯಾರ ಸಹಾಯವು ಇಲ್ಲದೆ ಸದರಿ ಜಮೀನನ್ನು ತನ್ನ ಸ್ವಂತ ಹಣದಿಂದ ಖರೀದಿಸಿದ್ದಾರೆ ಅಂದರೆ ಸರಿಯಲ್ಲ. ಸದರಿ ಕಡಹಟ್ಟಿ ಗ್ರಾಮದ ಸರ್ವೆ ನಂಃ3/2 ರಲ್ಲಿ 1 ಎಕರೆ 20 ಗುಂಟೆ ಜಮೀನು ಇವರೆಗೂ 1 ನೇ ಪ್ರತಿವಾದಿ ಅಣ್ಣಾಗೌಡಾ ಹೆಸರಿನಲ್ಲಿ ಇರುತ್ತದೆ ಅಂದರೆ ನನಗೆ ಗೋತ್ತಿಲ್ಲಾ. ದಾವೇದ ಮನೆ ಮತ್ತು ಖುಲ್ಲಾ ಜಾಗೆ ವಿ ಪಿ ಸಿ ನಂಬರ ನನಗೆ ಗೋತ್ತಿಲ್ಲಾ. ವಿ ಪಿ ಸಿ ನಂಃ 138

ಆಸ್ತಿಯನ್ನು ವಾದಿ ಸುಭಾಸ , ಪ್ರತಿವಾದಿಯರಾದ ಪ್ರಕಾಶ ಮತ್ತು ಸುರೇಶ ಇವರು 1 ನೇ ಪ್ರತಿವಾದಿ ಅಣ್ಣಾಗೌಡನಿಗೆ ಮಾರಾಟ ಮಾಡಿದ್ದಾರೆ ಅಂದರೆ ಅದು ಸುಳ್ಳು ಖರೀದಿ ಇದೆ ಅಂತಾ ಹೇಳುತ್ತಾರೆ. ಸದರಿ ಜಾಗೆಯಲ್ಲಿ 1 ನೇ ಪ್ರತಿವಾದಿ ಅಣ್ಣಾಗೌಡಾ ಮನೆ ಕಟ್ಟಿಕೊಂಡು ವಾಸ ಇದ್ದಾರೆ ಅಂದರೆ ನಿಜ. ವಾದಿ ಸುಭಾಸ ಪಾಟೀಲ ಸುಮಾರು ವರ್ಷಗಳಿಂದ ಬಸ್ತವಾಡ ಗ್ರಾಮದಲ್ಲಿ ವಾಸ ಇದ್ದಾರೆ ಅಂದರೆ ಸಾಕ್ಷಿ 8 ವರ್ಷಗಳಿಂದ ಮತ್ತು ಜಗಳ ಪ್ರಾರಂಭವಾದಾಗಿನಿಂದ ಅಲ್ಲಿ ವಾಸ ಇದ್ದಾರೆ ಅಂತಾ ಹೇಳುತ್ತಾರೆ. ವಿ ಪಿ ಸಿ ನಂಃ 170 ಆಸ್ತಿಗೆ ವಾದಿ ಮತ್ತು ಪ್ರತಿವಾದಿಯರ ಹೆಸರುಗಳು ದಾಖಲ ಇವೆ ಅಂದರೆ ನಿಜ. 1 ನೇ ಪ್ರತಿವಾದಿ ಅಣ್ಣಾಗೌಡಾ ತನ್ನ ಹೆಸರಿನಲ್ಲಿರುವ ಜಮೀನು ಮತ್ತು ಮನೆಯ ತೆರಿಗೆ ಆತನೇ ತುಂಬುತ್ತಾನೆ ಅಂದರೆ ನಿಜ. 1 ನೇ ಪ್ರತಿವಾದಿ ಅಣ್ಣಾಗೌಡಾ ಖರೀದಿ ತೆಗೆದುಕೊಂಡ ಜಮೀನಿನಲ್ಲಿ ಮತ್ತು ಕಟ್ಟಿಸಿದ ಮನೆಯಲ್ಲಿ ವಾದಿಗೆ ಪಾಲು ಕೊಡಿಸಬೇಕು ಅನ್ನುವ ಉದ್ದೇಶದಿಂದ ಅವರ ಪರವಾಗಿ ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನನಗೂ ಮತ್ತು 1 ನೇ ಪ್ರತಿವಾದಿ ಅಣ್ಣಾಗೌಡಾನಿಗೂ ಮಾತುಕತೆ ಇಲ್ಲಾ ಅಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ನಾನೇ ಮಾಹಿತಿ ಕೊಟ್ಟು ಟೈಪ ಮಾಡಿಸಿರುತ್ತೆನೆ. ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ನನಗೆ ಕೊರ್ಟನಿಂದ ನೋಟಿಸ ಬಂದಿತ್ತು. 1 ನೇ ಪ್ರತಿವಾದಿ ಅಣ್ಣಾಗೌಡಾನ ಆಸ್ತಿಯಲ್ಲಿ ವಾದಿಗೆ ಭಾಗ ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ** ಶ್ರೀ ಎಸ್ ಎಸ್ ಎಸ್ ವಕೀಲರಿಂದ 2 ರಿಂದ 5 ನೇ ಪ್ರತಿವಾದಿಯರ ಪರಃ

ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಬಗ್ಗೆ ನನಗೆ ಸುಮಾರು ವರ್ಷಗಳಿಂದ ಮಾಹಿತಿ ಇದೆ. 4 ನೇ ಪ್ರತಿವಾದಿಯ ಗಂಡ ಮತ್ತು 5 ಮತ್ತು 6 ನೇ ಪ್ರತಿವಾದಿಯರ ತಂದೆ ಕುಮಾರ ಪೋಲಿಸ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ಧ, ಆತನು ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡಿದ್ದಾರೆ ಅಂದರೆ ಸಾಕ್ಷ ಅವರು ಚಿಕ್ಕೋಡಿಯಲ್ಲಿ ಕೆಲಸ ಮಾಡಿದ್ದಾರೆ ಅಂತಾ ಹೇಳುತ್ತಾರೆ. ಸದರಿ ಕುಮಾರ ಇತನು ಪದೊನ್ನತಿ ಹೊಂದಿ ಪಿ ಎಸ್ ಐ ಆಗಿದ್ದರು ಅಂದರೆ ನನಗೆ ಗೋತ್ತಿಲ್ಲಾ. ಸದರಿ ಕುಮಾರ ಚಿಕ್ಕೋಡಿಯಲ್ಲಿ ಸ್ವಂತ ಮನೆ ಕಟ್ಟಿಸಿದ್ದು ಈಗ 4 ರಿಂದ 6 ನೇ ಪ್ರತಿವಾದಿಯರು ಅಲ್ಲಿ ವಾಸ ಇದ್ದಾರೆ ಅಂದರೆ ನನಗೆ ಗೋತ್ತಿಲ್ಲಾ. ಈ ಕೇಸ

ದಾಖಲಿಸಿದ ನಂತರ ಸುಮಾರು ನಾಲ್ಕೈದು ವರ್ಷಗಳ ಹಿಂದೆ ನಾನು, ನಮ್ಮ ಊರಿನ ಕುಲಕರ್ಣಿ ಮುರುಗೇಶ, ಮಹಾರುದ್ರ ಮತ್ತು ಗಣಮುಖಿ ವಕೀಲರು ಸೇರಿ ಪಂಚಾಯತಿ ಮಾಡಿದ್ದೆವು. ಆ ಕಾಲಕ್ಕೆ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರು ಹಾಜರು ಇದ್ದರು. ಕುಮಾರ ಇತನು ಐದಾರು ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ರಾಜಿ ಮಾತುಕತೆ ಕಾಲಕ್ಕೆ ಪಡ ಜಾಗ ಮತ್ತು ಮನೆಗಳ ಬಗ್ಗೆ ಮಾತ್ರ ನಮಗೆ ವಿಚಾರ ತಿಳಿಸಿದ್ದರು. ಸದರಿ ಪಡ ಜಾಗ ಮತ್ತು ಮನೆಗಳು ಉಳಾಗಡ್ಡಿ ಖಾನಾಪೂರದಲ್ಲಿ ಬರುತ್ತವೆ. ಈ ದಾವೇಯಲ್ಲಿ ಯಾವ ಯಾವ ಜಮೀನುಗಳು ಇವೆ ಅಂದರೆ ಸಾಕ್ಷಿ ನಮ್ಮ ಜಮೀನಿನ ಸುತ್ತ ಮುತ್ತ ಇರುವ ವಾದಿ ಮತ್ತು ಪ್ರತಿವಾದಿಯರ ಜಮೀನುಗಳು ನಮಗೆ ಗೊತ್ತು ಅಂತಾ ಹೇಳುತ್ತಾರೆ. ಅವರಿಗೆ ಸೇರಿದ ನಮ್ಮ ಊರಿನ 6 – 7 ಜಮೀನುಗಳ ಬಗ್ಗೆ ನನಗೆ ಗೋತ್ತು. ಒಂದು ಜಮೀನು 07 ಎಕರೆ 30 ಗುಂಟೆ ಜಮೀನು ಇದ್ದು ಅದು ಗುಡ್ಡದ ಜಮೀನು ಇದೆ ಅಂದರೆ ನಿಜ. ಈ ಕೇಸ ದಾಖಲಿಸಿದ ನಂತರ ನಾನು ಪಂಚಾಯತಿ ಮಾಡಿದ್ದೆ ಅಂತಾ ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಾನು ಉಳಾಗಡ್ಡಿ ಖಾನಾಪೂರದಲ್ಲಿ ರಾಜಕೀಯವಾಗಿ ಪ್ರಬಲ ವ್ಯಕ್ತಿ ಇದ್ದೆನೆ ಅಂದರೆ ನಿಜ. 1 ರಿಂದ 3 ನೇ ಪ್ರತಿವಾದಿಯರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನನಗೆ ವೈಯಕ್ತಿಕವಾಗಿ ವಾದಿ ಪ್ರತಿವಾದಿಯರ ಮನೆತನದ ಬಗ್ಗೆ ಮತ್ತು ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ